**1.**ಅಳುವದ್ಯಾತಕೊ ರಂಗ ಅತ್ತರಂಜಿಪ ಗುಮ್ಮ

ಪುಟ್ಟಿದೇಳು ದಿವಸದಲಿ  ದುಷ್ಟ ಪೂತನಿಯ ಕೊಂದೆ
ಮುಟ್ಟಿ ವಿಷದ ಮೊಲೆಯುಂಡ ಕಾರಣ
ದೃಷ್ಟಿ ತಾಕಿತೆ ನಿನಗೆ ರಂಗಯ್ಯ

ಬಾಲಕತನದಿ ಗೋಪಾಲಕರೊಡಗೂಡಿ
ಕಾಳಿಂದಿ ಮಾಡುವನು ಕಲಕಿದ ಕಾರಣ
ಕಾಲು ಉಳುಕಿತೆ ನಿನಗೆ ರಂಗಯ್ಯ

ತುರುವ ಕಾಯಲು ಪೋಗೆ ಭರದಿ ಇಂದ್ರ ಮಳೆಗರೆಯೆ
ಬೆರಳಲಿ ಬೆಟ್ಟವನೆತ್ತಿದ ಕಾರಣ
ಬೆರಳು ಉಳುಕಿತೆ ನಿನಗೆ ರಂಗಯ್ಯ

ವಸುದೇವ ಸುತನಾಗಿ ಅಸುರರೆಲ್ಲರ ಮಡುಹಿ
ಹೆಸರಿನ ಮಲ್ಲರ ಮಡುಹಿದ ಕಾರಣ
ಕಿಸಿರು ತಾಕಿತೆ ನಿನಗೆ ರಂಗಯ್ಯ

ಶರಣು ವೇಲಾಪುರದ ಚೆಲುವ ಚೆನ್ನಿಗರಾಯ
ಪರಿಪರಿ ವಿಧದಿಂದ ಶರಣರ ಪೊರೆಯುವ
ವರದ **ಪುರಂದರವಿಠಲ**ರಾಯ

**2.**ಬಾರೆ ಭಾಗ್ಯದ ನಿಧಿಯೇ ಕರವೀರ
ನಿವಾಸಿನಿ ಸಿರಿಯೆ **||**ಪ**||**
ಬಾರೆ ಬಾರೆ ಕರವೀರ ನಿವಾಸಿನಿ ಬಾರಿಬಾರಿಗು ಶುಭ
ತೋರು ನಮ್ಮ ಮನಗೆ **||**ಅ.ಪ**||**

ಲೋಕಮಾತೆಯು ನೀನು ನಿನ್ನ ತೋಕನಲ್ಲವೆ ನಾನು
ಆಕಳು ಕರುವಿನ ಸ್ವೀಕರಿಸುವಪರಿ
ನೀ ಕರುಣದಿ ಕಾಲ್ಹಾಕು ನಮ್ಮ ಮನಗೆ **||1||**

ನಿಗಮ ವೇದ್ಯಳೆ ನಿನ್ನ ನಾ ಪೊಗಳಲಾಪೆನಲ್ಲ
ಮಗನಪ ರಾಧವ ತೆಗೆದೆಣಿಸದಲೆ ಲಗು
ಬಗೆಯಿಂದಲಿ ಪನ್ನಗವೇಣಿ **||2||**

ಕಡೆಗೆ ನಮ್ಮನೆ ವಾಸ ಒಡೆಯ 'ಅನಂತಾದ್ರೀಶ'
ಒಡೆಯನಿದ್ದಲ್ಲಿಗೆ ಮಡದಿಯು ಬಾಹೊದು
ರೂಢಿಗುಚಿತವಿದು ನಡೆ ನಮ್ಮ ಮನೆಗೆ **||3||**

**3.**ಬಾರೆ ನಮ್ಮ ಮನಿತನಕ ಭಾಗ್ಯದ ದೇವಿ |ಪ|

ಬಾರೆ ನಮ್ಮ ಮನಿತನಕ ಬಹಳ ಕರುಣದಿಂದ ಜೋಡಿಸಿ
ಕರಗಳ ಎರಗುವೆ ಚರಣಕೆ |ಅ ಪ|

ಜರದ ಪೀತಾಂಬರ ನೀರಿಗೆಗಳ್ ಹೊಳೆಯುತ
ಸರಗಿ ಸರವು ಚಂದ್ರ ಹಾರಗಳ್ ಹೊಳೆಯುತ || ೧ ||

ಹರಡಿ ಕಂಕಣ ದುಂಡು ಕರದಲ್ಲಿ ಹೊಳೆಯುತ
ತರುಳನ ಮ್ಯಾಲೆ ತಾಯೆ ಕರುಣವಿಟ್ಟು ಬೇಗನೇ || ೨ ||

ಮಂದ ಗಮನೆ ನಿನಗೆ ವಂದಿಸಿ ಬೇಡುವೆ
ಇಂದಿರೇಶನ ಕೂಡ ಇಂದು ನಮ್ಮ ಮನಿತನಕ || ೩ ||

## ೪. ಟೊಂಕದ ಮ್ಯಾಲೆ ಕೈಯನಿಟ್ಟಾನ

ಟೊಂಕದ ಮ್ಯಾಲೆ ಕೈಯನಿಟ್ಟಾನ ಭಕ್ತಿ ಸುಂಕ ಬೇಡತಾನ
ಡೊಂಕ ಇಲ್ಲ ಬಿಂಕ ಇಲ್ಲ ಅಭಂಗ ಪದದವನ

ಭೀಮಭಯಂಕರ ದಂಡಿಮ್ಯಾಲೆ ಎದಿಮ್ಯಾಲಿರಿಸಿ ಅಭಯದಮಾಲೆ
ತಲಿಲೆಹೊತ್ತು ಸೀಮಲಿಂಗ ಅಭಂಗನಸ್ನಾನ ॥೧॥

ಅಂಗದಾಗ ಅನಂತ ಲೀಲ ಸಂಗದಾಗ ಸಂತರ ಜಾಲ
ಯೋಗಕ್ಷೇಮ ನಡಸ್ತಾನ ಭಂಗ ಆಗಧಾಂಗ ॥೨॥

ಇಟ್ಟಗಿ ಮ್ಯಾಲೆ ಕಾಲಿಟ್ಟಾನ ಕಾಲ ಸಂದಿಗೆಕೋಲಿಟ್ಟಾನ
ನೆಲೆಸಿದಲ್ಲಿ ಕಣ್ಣಿಟ್ಟಾನ ಪುಂಡರೀಕ ವರದ
ಅಂಬಿಕಾತನಯ ನನ್ನ ಕರೆದ